*(The witness is present in the remote point at Department of Forensic Medicine and Toxicology, Bengaluru. The co-ordinator at remote point i.e., Dr.C.N.Sumangala, Professor, who is co-ordinator of remote point is present and Smt.Hemavathi.H.I., Typist-Copyist who is the co-ordinator of court point is present. Before recording the evidence through Video Conferencing, it is ascertained that the voice is clearly audible and there is no technical defect in recording the evidence of witness through Video Conferencing.)*

## ***Duly Sworn on: 19.09.2022***

## ***Cross Examination by Sri.HJR.,Advocate for Accused:***

12. ಮರಣೋತ್ತರ ಪರೀಕ್ಷೆಯಲ್ಲಿ ನಾನು ಮರಣೋತ್ತರ ಪರೀಕ್ಷೆಯನ್ನು ನಡೆಸುವ ಮೊದಲು ಪೊಲೀಸರು ನನಗೆ ಮೃತಳಿಗೆ ಸಂಬಂಧಿಸಿದಂತೆ ಯಾವುದೇ ವೈದ್ಯಕೀಯ ವರದಿಯನ್ನು ಕೊಟ್ಟಿರಲಿಲ್ಲ. ಮರಣೋತ್ತರ ಪರೀಕ್ಷೆಯನ್ನು ನಡೆಸುವ ಮೊದಲು ನಾನು ಮೃತಳ ಶವವನ್ನು ಅವಲೋಕಿಸಿದ್ದೇನೆ. ಸಾಮಾನ್ಯವಾಗಿ ಮೃತ ದೇಹದ ಮೇಲೆ ರಕ್ತದ ಕಲೆಗಳು ಇದ್ದರೆ ಅದನ್ನು ಸ್ವಚ್ಚಗೊಳಿಸಿ ನಂತರ ಮರಣೋತ್ತರ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಪ್ರಕರಣದಲ್ಲಿ ನೀವು ಮರಣೋತ್ತರ ಪರೀಕ್ಷೆಯನ್ನು ನಡೆಸುವ ಮೊದಲು ಶವವನ್ನು ಸ್ವಚ್ಚಗೊಳಿಸಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಈ ಪ್ರಕರಣದಲ್ಲಿ ನೀವು ಮರಣೋತ್ತರ ಪರೀಕ್ಷೆಯನ್ನು ನಡೆಸುವ ಮೊದಲು ಮೃತಳ ಉದರ ಭಾಗದ ಕೆಳಗೆ ಸಂಪೂರ್ಣ ರಕ್ತ ಸ್ರಾವವಾಗಿರುವುದು ಕಂಡು ಬಂದಿತ್ತೆ ಎಂದರೆ ಸಾಕ್ಷಿ ಮರಣೋತ್ತರ ಪರೀಕ್ಷೆ ನಡೆಸುವ ಮೊದಲು ಅದು ನಮಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

13. ಮರಣೋತ್ತರ ಪರೀಕ್ಷೆಯಲ್ಲಿ ಮೃತಳ Uterus ನಲ್ಲಿ ಭ್ರೂಣವಿರುವುದು ಕಂಡು ಬಂದಿತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ನಿಪಿ.23 ರ ವರದಿಯಲ್ಲಿ ನಮೂದಿಸಿರುವ ಗಾಯಗಳು ಒಬ್ಬ 7-8 ತಿಂಗಳ ಗರ್ಭಿಣಿ ಎತ್ತರದ ಪ್ರದೇಶದಿಂದ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಒಬ್ಬ ಮಹಿಳೆಯ ಗರ್ಭಕೋಶದಲ್ಲಿ ರಕ್ತ ಹೆಪ್ಪು ಗಟ್ಟಿದರೆ ಅದನ್ನು ಸರಿಯಾದ ಸಮಯಕ್ಕೆ ತೆಗೆಯದಿದ್ದರೆ ರಕ್ತಸ್ರಾವವಾಗಿ ಆಕೆಯ ಸಾವು ಸಂಭವಿಸುತ್ತದೆ ಎಂದರೆ ಸರಿಯಲ್ಲ. ಒಬ್ಬ ತುಂಬು ಗರ್ಭಿಣಿಯ ಗರ್ಭಕೋಶಕ್ಕೆ ಪೆಟ್ಟಾಗಿ ಗರ್ಭಕೋಶದಲ್ಲಿ ರಕ್ತಸ್ರಾವವಾದ ಸಮಯದಲ್ಲಿ ಅದನ್ನು ಸಂಪೂರ್ಣವಾಗಿ

ಹೊರತೆಗೆಯದೇ ಇದ್ದ ಸಂದರ್ಭದಲ್ಲಿ ತಾಯಿ ಮತ್ತು ಮಗುವಿನ ಸಾವು ಸಂಭವಿಸುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಮೃತ ಅನಿತಾಗೆ ಗರ್ಭಕೋಶದಲ್ಲಿ ಸಂಪೂರ್ಣ ರಕ್ತ ಸ್ರಾವವಾಗಿದ್ದರಿಂದ ಆಕೆಯ ಸಾವು ಸಂಭವಿಸಿದೆ ಎಂದರೆ ಸರಿಯಲ್ಲ.

14. ಈ ಪ್ರಕರಣದಲ್ಲಿ ಮೃತ ಅನಿತಾಳ ಗರ್ಭಕೋಶದಲ್ಲಿ Intrauterine Device ಕಂಡು ಬಂದಿತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವೈದ್ಯಕೀಯ ಭಾಷ್ಷೆಯಲ್ಲಿ PPH ಎಂದರೆ Postpartum hemorrhage ಎಂದರೆ ಸರಿ. PPH ಎಂದರೆ heavy bleeding followed by miscarriage ಎಂದರೆ ಸರಿ. ಒಬ್ಬ ಗರ್ಭಿಣಿಗೆ ಗರ್ಭಪಾತವಾಗಿ ಅತಿಯಾದ ರಕ್ತಸ್ರಾವವಾದರೆ ಆಕೆಗೆ ತುರ್ತಾಗಿ ರಕ್ತವನ್ನು ಒದಗಿಸದೇ ಇದ್ದರೆ ಆಕೆಯ ಸಾವು ಸಂಭವಿಸುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿಯೂ ಸಹ ಮೃತ ಅನಿತಾಳಿಗೆ ಅತಿಯಾದ ರಕ್ತಸ್ರಾವವಾಗಿ ಸಾವು ಸಂಭವಿಸಿದೆ ಎಂದರೆ ಸರಿ.

***Re-examination: Nil.***

*(Typed to my dictation in Open Court)*

*R.O.I. & A.C.*

***Sd/-***

***(BHANUMATHI. B.C.)***
*2nd Addl. District and Sessions Judge,*
*Chikkamagaluru.*

*Hema*